

# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ. ಆರ್. ಮೋಹನ್

### ಛಾಯಾಚಿತ್ರ ೮೦

ನ್ಯೂಯಾರ್ಕಿನಿಂದ ಸುಮಾರು ೯೦ ಮೈಲಿ ದೂರದಲ್ಲಿ ಹಡ್ಸನ್ ನದಿಯ ಕಣಿವೆಯ ಹತ್ತಿರ ಸುಮಾರು ೫೦ ಎಕರೆ ವಿಶಾಲ ಪ್ರದೇಶದಲ್ಲಿ ಫ್ರಾನ್ಸಿಸ್ ಲೆಗೆಟ್ ಎಂಬುವವರ ವಿಶಾಲವಾದ ಬಂಗಲೆಯಿತ್ತು. ಅದರ ಹೆಸರು 'ರಿಡ್ಜ್ಲಿ ಮ್ಯಾನರ್' (RIDGLEY MANOR) ಎಂದು. ಸ್ವಾಮಿ ವಿವೇಕಾನಂದರು ೧೮೯೯, ಸೆಪ್ಟೆಂಬರ್ ತಿಂಗಳ ಮಧ್ಯಭಾಗವನ್ನು ಈ ನಿವಾಸದಲ್ಲಿ ಕಳೆದರು. ಆಗ ಅಲ್ಲಿ ತೆಗೆದ ಸಾಮೂಹಿಕ ಚಿತ್ರ ಇದು: ನಿಂತಿರುವವರು (ಎಡದಿಂದ) ಸ್ವಾಮಿ ತುರೀಯಾನಂದ, ಸ್ವಾಮಿ ಅಭೇದಾನಂದ. ಕುಳಿತವರು (ಎಡದಿಂದ) ಸ್ವಾಮಿ ವಿವೇಕಾನಂದ, ಮಿಸೆಸ್ ಆಲ್ಬರ್ಟಾ ಜೆಸ್ಸಿನಾ ಲೆಗೆಟ್ (ಮರೆಯಲ್ಲಿ), ಮಿಸ್ ಮೆಕ್‌ಲೌಡ್, ಆಲ್ಬರ್ಟಾಳ ಸ್ನೇಹಿತೆ.



ಛಾಯಾಚಿತ್ರ ೮೦

### ಛಾಯಾಚಿತ್ರ ೮೧

ರಿಡ್ಜ್ಲಿ ಮ್ಯಾನರ್ ಬಂಗಲೆಯ ಹತ್ತಿರದಲ್ಲಿ ಲಿಟ್ಲ್ ಕಾಟೇಜ್ ಎನ್ನುವ ಸುಂದರವಾದ ಪುಟ್ಟ ಕಟ್ಟಡವಿತ್ತು. ಸ್ವಾಮಿ ವಿವೇಕಾನಂದರು ಮತ್ತು ಸ್ವಾಮಿ ತುರೀಯಾನಂದರು ಅಲ್ಲಿ ವಾಸಮಾಡುತ್ತಿದ್ದರು. ಹಿಂದಿನ ಚಿತ್ರವನ್ನು (ಛಾಯಾಚಿತ್ರ ೮೦) ತೆಗೆದ ಮರುಗಳಿಗೆಯಲ್ಲಿಯೇ ಈ ಚಿತ್ರವನ್ನು ಕೂಡ ಲಿಟ್ಲ್ ಕಾಟೇಜ್ ಎದುರಿಗೆ ತೆಗೆಯಲಾಯಿತು. ಹಿಂದಿನ ಚಿತ್ರದಲ್ಲಿ ಇದ್ದವರೆಲ್ಲರೂ ಈ ಚಿತ್ರದಲ್ಲಿಯೂ ಕಾಣಿಸಿಕೊಂಡಿರುವುದು ವಿಶೇಷ.



ಛಾಯಾಚಿತ್ರ ೮೧

ಈ ಚಿತ್ರಗಳಲ್ಲಿ ಎರಡು ವ್ಯತ್ಯಾಸಗಳನ್ನು ನಾವು ಗಮನಿಸಬಹುದು. ಮಧ್ಯಾಹ್ನದ ಸೂರ್ಯನ ತೀಕ್ಷ್ಣ ಕಿರಣಗಳಿಂದ ರಕ್ಷಿಸಿಕೊಳ್ಳಲು ಮಿಸೆಸ್ ಆಲ್ಬರ್ಟಾ ತನ್ನ ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡಿದ್ದಾಳೆ. ಎರಡನೆಯದು, ಈ ಚಿತ್ರದಲ್ಲಿ ಸ್ವಾಮೀಜಿ ನಿಂತುಕೊಂಡಿದ್ದಾರೆ ಮತ್ತು ಅನಾರೋಗ್ಯದಿಂದ ಬಳಲಿರುವಂತೆ ಕಾಣುತ್ತಿದ್ದಾರೆ.